ಪ್ರಬಂಧ



**ಜಿ.ವಿ. ಆನಂದಮೂರ್ತಿ**

ಕಲೆ: ವೆಂಕಟ್ರಮಣ ಭಟ್

# ಹೂವಿನ ತೋಟ

ಬೆಳಗಿನ ಸೂರ್ಯನ ಪರಿಶುದ್ಧ ಎಳೆಗಳು ಹೂಗಳ ಮೇಲೆ ತಾಕುವ ಮುಂಚೆ, ನಾವು ಹೂವಿನ ತೋಟದ ತಡಿಕೆ ಬಾಗಿಲಲ್ಲಿ, ಸ್ವರ್ಗದ ಬಾಗಿಲಿನ ಮುಂದೆ ತುದಿಗಾಲಲ್ಲಿ ನಿಂತಿರುತ್ತಿದ್ದೆವು. ಹೊರಗಿನ ಜಗತ್ತು ಮಂಜು ಮುಸುಕಿದ ನಸುಗತ್ತಲಲ್ಲಿ ಮಲಗಿರುತ್ತಿತ್ತು. ಧಾರ್ಮಿಕ ಅರ್ಥದಲ್ಲಿ 'ಹೂವಿನ ತೋಟ'ಗಳಿಗೆ ಹಲವು ರೂಪಾತ್ಮಕವಾದ ಅರ್ಥಗಳೂ ಇವೆ. ಅವು ನಮ್ಮನ್ನು ನೇರವಾಗಿ ಸ್ವರ್ಗದ ಬಾಗಿಲಿಗೇ ಕರೆದೊಯ್ಯುತ್ತವೆ ಎಂಬುದು! ಇನ್ನೊಂದು: ಅವು ಬಹುತ್ವದ ಸಂಕೇತದ ಅರ್ಥವನ್ನೂ ಪಡೆದುಕೊಂಡಿವೆ. ಕುವೆಂಪು ಅವರ ಪ್ರಖ್ಯಾತ ಕವಿತೆಯ ಸಾಲು 'ಸರ್ವ ಜನಾಂಗದ ಶಾಂತಿಯ ತೋಟ' ಎಂಬುದು ಈ ಅರ್ಥದಲ್ಲಿಯೇ ಮತ್ತೆ ಮತ್ತೆ ಬಳಕೆಯಾಗುತ್ತಿದೆ.

ಹೂವಿನ ತೋಟದ ಮುಂದೆ ನಾವು ನಿಂತ ಸಾಲಿನಲ್ಲಿ ಎಂಬತ್ತರ ವೃದ್ಧರಿಂದ ಮೊದಲುಗೊಂಡು, 10–12 ವರುಷಗಳ ಶಾಲೆಗೆ ಹೋಗುವ ಬಾಲಕರವರೆಗೂ ಅನೇಕರು ಕೈಯಲ್ಲಿ ತೆಂಗಿನ ಗರಿಯಿಂದ ಹೆಣೆದ ಅಥವಾ ಬಿದಿರಿನ ಹೂಬುಟ್ಟಿ ಹಿಡಿದು ನಿಂತಿರುತ್ತಿದ್ದರು. ನಾನು ನೋಡಿದಂತೆ ಸಾಲಿನಲ್ಲಿ ನಿಂತಿರುತ್ತಿದ್ದವರಲ್ಲಿ ಬಹುಪಾಲು ಹಿರಿಯರು, ದೈನಂದಿನ ಹೋರಾಟದಲ್ಲಿಯೇ ತಮ್ಮ ಬದುಕಿನ ದೀರ್ಘ ಸಮಯವನ್ನು ಸವೆಸಿದವರಾಗಿದ್ದರು. ಆ ಹಿರಿಯರಲ್ಲಿ ಶ್ರದ್ಧೆ, ಸಮಾಧಾನದ ಮನಸ್ಸು, ಕಿರಿಯರ ಬಗೆಗೆ ಆತ್ಮೀಯತೆ ಇರುತ್ತಿತ್ತು. ಇದರ ಜೊತೆಯಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಹೂಗಳು ತಮ್ಮ ಬುಟ್ಟಿಗೆ ಬರಲಿ ಎನ್ನುವ ಬಯಕೆ ಅವರ ವಯಸ್ಸನ್ನೂ ಮೀರಿ ಬೆಳೆದಿತ್ತು. ಮುಪ್ಪಿನಲ್ಲಿ ಕಂಡುಬರುವ ಅತಿಯಾದ ದೈವಿಕ ಶ್ರದ್ಧೆ ಅವರನ್ನು ಒಂದು ಬೊಗಸೆ ಹೂವಿಗಾಗಿ ಹೂವಿನ ತೋಟಕ್ಕೆ ಬರುವಂತೆ ಮಾಡಿತ್ತು.

ನಮ್ಮ ಎಳವೆಯ ಕಾಲದಲ್ಲಿ ಭಕ್ತರಿಗಾಗಿಯೇ ಹೂವಿನ ತೋಟವನ್ನು ಬೆಳೆಸುತ್ತಿದ್ದರು. ಹೂಗಳನ್ನು ಬಿಡಿಸಿಕೊಳ್ಳಲು ಸಾರ್ವಜನಿಕರಿಗೆ ಪ್ರತಿ ಶನಿವಾರ ಬೆಳಗಿನ ಜಾವ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ತೋಟದೊಳಗೆ ಉಚಿತವಾಗಿ ಬಿಡುವ ಸಂಪ್ರದಾಯವಿತ್ತು. ಸಾರ್ವಜನಿಕರಿಗಾಗಿ ಹೂವಿನ ಗಿಡಗಳನ್ನು ಬೆಳಸಲೆಂದೇ ಅವರು ತಮ್ಮ ತೋಟಗಳಲ್ಲಿ ಒಂದು ಪಾಲನ್ನು ಮೀಸಲಾಗಿರಿಸಿಕೊಂಡಿದ್ದರು. ಶನಿವಾರ ಹೊರತುಪಡಿಸಿ, ವಾರದ ಮಧ್ಯದಲ್ಲಿ ಹೂವಿನ ತೋಟಕ್ಕೆ ಯಾರಿಗೂ ಪ್ರವೇಶ ಕೊಡುತ್ತಿರಲಿಲ್ಲ. ನನ್ನ ಹಿರಿಯ ತಲೆಮಾರಿನಲ್ಲಿ ಇದೊಂದು ಸಂಪ್ರದಾಯವೇ ಆಗಿತ್ತು. ಆಗಿನ ದೈವಿಕ ಶ್ರದ್ಧೆಯ ಹಿರಿಯರಿಗೆ ಇದೂ ಒಂದು ಬಗೆಯ ಧರ್ಮ ಕಾರ್ಯದ ಭಾಗವೇ ಆಗಿತ್ತು. ಕೆರೆಯ ಏರಿ ಬುಡದಲ್ಲೇ ಇದ್ದ ನಮ್ಮ ಸೊಪ್ಪಿನ ತೋಟಗಳ